ಕ್ರಮವೆನಿಸಲಾರದು, ಕಾರಣ ನ್ಯಾಯದಾನದಿಂದ ವಂಚಿತವಾಗಿರುವ ಬೀಳಗಿ ತಾಲ್ಲೂಕಿಗೆ ಈ ಕೂಡಲೇ ಒಂದು ನ್ಯಾಯಾಲಯವನ್ನು ಕೊಡಬೇಕೆಂದೂ ಈ ದಿಶೆಯಲ್ಲಿ ಅತ್ಯಂತ ತೀವ್ರವಾದ ಹಾಗೂ ಉಚಿತವಾದ ಕ್ರಮವನ್ನು ಕೈಗೊಳ್ಳಬೇಕೆಂದೂ ನಾನು ತಮ್ಮ ಮೂಲಕ ಸನ್ಮಾನ್ಯ ಕಾನೂನು ಸಚಿವರ ಗಮನ ಸೆಳೆಯ ಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ನಗರಾಡಳಿತ ಸಚಿವರು).— ಸನ್ಮಾನ್ಯ ಅಧ್ಯಕ್ಷರೇ ಬೀಳಗಿಯಲ್ಲಿ ಮುನ್ಸೀಫ್ ಮ್ಯಾಜಿಸ್ಟ್ರೇಟ್ ಕೋರ್ಟನ್ನು ಸ್ಥಾಪನೆ ಮಾಡುವ ವಿಷಯ ಹೈಕೋರ್ಟಿನವರ ವಿಚಾರದಲ್ಲಿದೆ. ಅವರು ಬೀಳಗಿಯಲ್ಲಿ ಸದರಿ ಕೋರ್ಟ್ ಸ್ಥಾಪನೆಯಾಗಬೇಕೆಂಬುದನ್ನು ಒಪ್ಪಿಕೊಂಡರೆ ಮುಂದಿನ ಕ್ರಮ ಅಂದರೆ ಹಣ ಒದಗಿಸಿ ಕೊಡುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳುತ್ತದೆ. ಜನವರಿಯಲ್ಲಿ ನಮಗೆ ಉತ್ತರ ಬರೆದು ಕಳುಹಿಸಿದ್ದಾರೆ. ಹೈಕೋರ್ಟಿನ ಪರಿಶೀಲನೆಯಲ್ಲಿದೆ ಎಂದು, ಬೇಗ ತೀರ್ಮಾನ ಮಾಡಬೇಕೆಂದು ಹೈಕೋರ್ಟಿನವರಲ್ಲಿ ಬಾಬುರೆಡ್ಡಿ ತುಂಗಳ್ ಅವರ ಪರವಾಗಿ ವಿನಂತಿಸುತ್ತೇನೆ.

೧೧. ಹೆಂಚು ಕಾರ್ಮಿಕರ ಕರಡು ಕನಿಷ್ಟ ವೇತನದ ಬಗ್ಗೆ.

ಶ್ರೀ ಬಿ. ಎಂ. ಇಬ್ರಾಹಿಂಸಾಬ್ (ಉಳ್ಳಾಲ).— ಅಧ್ಯಕ್ಷರೇ, ಹೆಂಚು, ಕಾರ್ಮಿಕರ ಕರಡು ಕನಿಷ್ಟ ವೇತನದ ಬಗ್ಗೆ ಸಲಹೆ, ಸೂಚನೆ ಮತ್ತು ಆಕ್ಷೇಪ ಇದ್ದಲ್ಲಿ ಸಂಬಂಧಿಸಿದವರು ತಿಳಿಸಲು ವಿಶೇಷ ಗೆಜೆಟ್‌ನಲ್ಲಿ ತಿಳಿಸಲಾಗಿತ್ತು. ಅದರ ಅವಧಿ ೧೮-೪-೧೯೮೬ಕ್ಕೆ ಮುಗಿದಿರಂತ್ತದೆ. ಈಗ ನಾಲ್ಕು ತಿಂಗಳು ಕಳೆದುಹೋಯಿತು ಅಂತಿಮ ಪ್ರಕಟಣೆ ಇನ್ನೂ ಬಂದಿಲ್ಲ. ಹೆಂಚು ಕೆಲಸಗಾರರು ದಕ್ಷಿಣ ಕನ್ನಡದಲ್ಲಿ ಹೆಚ್ಚಾಗಿದ್ದು, ಉಳಿದ ಕಡೆಯೂ ಇದ್ದಾರೆ.

ಆದಕಾರಣ ದಕ್ಷಿಣ ಕನ್ನಡ ಮತ್ತು ಇತರ ಕಡೆಯ ೧೦ ಸಾವಿರಕ್ಕೂ ಮಿಕ್ಕಿದ ಹೆಂಚಿನ ಕಾರ್ಮಿಕರಿಗೆ ಅನ್ಯಾಯವಾಗಿರುತ್ತದೆ. ಕರಡು ಕನಿಷ್ಠ ವೇತನದ ಸಲಹೆ, ಆಕ್ಷೇಪದ ಅವಧಿ ಕಳೆದು ನಾಲ್ಕು ತಿಂಗಳು ಹೋದುದರಿಂದ ಈ ಕುರಿತು ಯಾವಾಗ ಅಂತಿಮ ಪ್ರಕಟಣೆ ಮಾಡುತ್ತೀರಿ ಎಂಬ ಕುರಿತು ವಿವರಕ್ಕಾಗಿ ಕಾರ್ಮಿಕ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

(ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ ಅವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಸಚಿವರು).—ಹೆಂಚು ಉದ್ದಿಮೆಯವರಿಗೆ ಕನಿಷ್ಟ ವೇತನ ಕೊಡುವ ಸಲುವಾಗಿ ಸಲಹೆ, ಆಕ್ಷೇಪಣೆ ಕೋರಿ ಕರಡು ಪ್ರಸ್ತಾಪವನ್ನು ಸಂಖ್ಯೆ ೧೭/೮೬ ದಿನಾಂಕ ೫-೨-೧೯೮೬ ರಂದು ಹೊರಡಿಸಲಾಗಿತ್ತು. ಸಲಹೆ, ಆಕ್ಷೇಪಣೆ ಕಳುಹಿಸಲು ಕೊನೆಯ ದಿನಾಂಕ ೧೮-೪-೧೯೮೬ ಆಗಿತ್ತು. ಆ ಬಗ್ಗೆ ಸ್ವೀಕೃತವಾದ ಅನೇಕ ಸಲಹೆ ಆಕ್ಷೇಪಣೆಗಳನ್ನು ಪರಿಶೀಲಿಸಲಾಗುತ್ತಿದೆ. ಅವನ್ನು ಪರಿಶೀಲಿಸಿದ ನಂತರ ಸಲಹಾ ಮಂಡಲಿಯ ಶಿಫಾರಸ್ಸು ಪಡೆದು ಅಂತಿಮ ತೀರ್ಮಾನಗಳನ್ನು ಬೇಗನೆ ಕೈಗೊಳ್ಳಲಾಗುವುದು. ಇಲ್ಲಿ ಡಿಲೇ ಆಗಿದೆ. ಅಬ್ಜೆಕ್ಷನ್ಸ್ ಎಲ್ಲಾ ಬಂದಿವೆ. ಆದಷ್ಟು ಬೇಗನೆ ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ.

೧೨. ನಿಪ್ಪಾಣಿ ಬೂದಿಹಾಳ ಮಾರ್ಗದಲ್ಲಿ ಬಸ್ ಸಾರಿಗೆ ವ್ಯವಸ್ಥೆಯನ್ನು ಏರ್ಪಡಿಸುವ ಬಗ್ಗೆ.

SRI VEERAKUMAR PATIL (Nippani).—Sir, the distance between Nippani and Budihal is about 10 Kms. Nearly 50 students are travelling from Budihal to Nippani and Vice-versa. Since last one year this is being represented by the students as well as villagers. so far nothing has been done. The students are put to lot of hard-ships. Hence, I urge the Government to direct the KSRTC to run the bus on the above route.

ಶ್ರೀ ವೀರಣ್ಣ (ಸಾರಿಗೆ ಮಂತ್ರಿಗಳು).— ಅಧ್ಯಕ್ಷರೇ, ನಿಪ್ಪಾಣಿ ಕ್ಷೇತ್ರದ ಶಾಸಕರಾದ ಮಾನ್ಯ ಶ್ರೀ ವೀರಕುಮಾರ ಅಪ್ಪಾಸೋ ಪಾಟೀಲ್‌ರವರು ದಿನಾಂಕ ೪-೩-೧೯೮೬ರ ತಮ್ಮ ಪತ್ರದಲ್ಲಿ ನಿಪ್ಪಾಣಿ—ಬೂದಿಹಾಳ ಮಾರ್ಗದಲ್ಲಿ ಬಸ್ ಸಾರಿಗೆಯನ್ನು ಆರಂಭಿಸಲು ಕೋರಿದ್ದರು. ಏಪ್ರಿಲ್